ಶ್ರೀ ಬಿ. ಭಾಸ್ಕರ ಶೆಟ್ಟಿ .—ರೈತರಿಗೆ ಶೇಕಡ ೩½ ಭೂಗದಷ್ಟು ಸಬ್ಸಿಡಿ ಸರ್ಕಾರದವರು ಕೊಡ ಬೇಕೆಂದಿರುವಾಗ, ಅವರಿಗೆ ವಿಶೇಷ ಸವಲತ್ತುಗಳನ್ನು ಕೊಡುವುದರ ಜೊತೆಗೆ ಬ್ಯಾಂಕುಗಳ ಮೂಲಕ ಸಾಲ ಸಿಗುವ ವ್ಯವಸ್ಥೆಯನ್ನೂ ಸಹ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ .—ಬ್ಯಾಂಕುಗಳ ಮೂಲಕ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಸಾಲ ಕೊಡುವಾಗ ಅವರಿಗೆ ಸರ್ಕಾರ ಗ್ಯಾರಂಟಿ ಕೊಡುವ ಜವಾಬ್ದಾರಿಯನ್ನು ವಹಿಸುತ್ತದೆ.

ಶ್ರೀ ಯು. ಟಿ. ಫರೀದ್ —ಈ ೧ ಮಾರ್ಜಿನಲ್ ಬೆನಿಫಿಟ್ಟನ್ನು ಸೌತ್ ಕೆನರಾ ತಾಲ್ಲೂಕಿಗೆ ಎಕ್ಸ್‌ಟೆಂಡ್ ಮಾಡಿದ್ದೀರಿ. ಅದಮೇಲೆ ಇದನ್ನು ಮುಂದೆ ಇಡೀ ಸಂಸ್ಥಾನಕ್ಕೇ ಎಕ್ಸ್‌ಟೆಂಡ್ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದು ಸೆಂಟ್ರಲ್ ಗೌರ್ನಮೆಂಟ್ ಸ್ಕೀಂ ಆಗಿರುವುದರಿಂದ ಎರಡು ಜಿಲ್ಲೆಗಳಿಗೆ ಮಾತ್ರ ಪರವಾನೆ ಕೊಟ್ಟಿದೆ.

ಶ್ರೀ ಬಿ. ವಿ. ಕಕ್ಕಿಲಾಯ .—ಪುಂಗಳೂರಿನಲ್ಲಿ ಎಲ್ಲಾ ಎಂ. ಎಲ್. ಎ. ಗಳು ಮಾನ್ಯ ಕಂದಾಯ ಸಚಿವರಿಗೆ ಈ ಯೋಜನೆಯನ್ನು ಎಲ್ಲಾ ಕಡೆಗೂ ವಿಸ್ತಾರ ಮಾಡಬೇಕೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ ಎಚ್. ಪಾಟೀಲ್ .—ಅದು ಸರ್ಕಾರದ ಗಮನಕ್ಕೆ ಬಂದ ಹಾಗೆ ನನಗೆ ಕಾಣುತ್ತದೆ. ನಾನು ಹೇಳಿದ ಹಾಗೆ ಈಗಾಗಲೇ ಕೇಂದ್ರ ಸರ್ಕಾರದವರು ನಿರ್ದಿಷ್ಟವಾದ ಒಂದು ನಿಲುವನ್ನು ಈ ಬಗ್ಗೆ ತಳೆದು ಎರಡು ತಾಲ್ಲೂಕುಗಳಿಗೆ ಮಾತ್ರ ಈ ಯೋಜನೆಯನ್ನು ವಿಮಾಸಲಾಗಿಟ್ಟಿದ್ದಾರೆ. ಆದ್ದರಿಂದ ಹೆಚ್ಚು ವಿಸ್ತರಣೆ ಮಾಡುವುದಕ್ಕೆ ಸಧ್ಯಕ್ಕೆ ಅವಕಾಶವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ .—ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಿಗೆ ವಿಶೇಷವಾದಂಥ ಕಾರಣಗಳಿವೆಯೆಂದು ಹೇಳಿದಿರಿ. ಆ ರೀತಿಯಾಗಿ ಬೇರೆ ಕಡೆಗಳಲ್ಲಿ ಇದ್ದರೆ ಆಗ ಈ ಯೋಜನೆಯನ್ನು ಅಲ್ಲಿಗೂ ವಿಸ್ತರಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ .—ಮೊದಲು ಅದನ್ನು ಎಸ್ತರಣೆ ಮಾಡುವಾಗ ಯಾವ ರೀತಿ ರೂಪ ರೇಖೆಗಳು ಅಳವಡಿಸಿದ್ದರೋ ಗೊತ್ತಿಲ್ಲ. ಅದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದು ಒಂದು ನಿಲುವಿಗೆ ಬಂದಿರುವುದರಿಂದ ಈಗ ಅದನ್ನು ಬದಲಾವಣೆ ಮಾಡುವುದು ಸಮರ್ಪಕವಲ್ಲ.

ಶ್ರೀ ಬಿ ಭಾಸ್ಕರಶೆಟ್ಟಿ .—ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ಒದಗಿಸುತ್ತೇವೆಂದು ಹೇಳಿದಿರಿ. ಸಹಕಾರ ಸಂಘಗಳು ಡಿಫಾಲ್ಟರ್ಸ್ ಆದರೆ ರೈತರಿಗೆ ಸಾಲ ಸಿಗುವುದಿಲ್ಲ. ಅದಕ್ಕಾಗಿ ತಾವು ಈ ಸಾಲವನ್ನು ಕೊಡುವಾಗ ಏನಾದರೂ ವಿಶೇಷ ರೀತಿ ಯೋಜನೆಯೊಂದನ್ನು ಮಾಡಿ ರೈತರಿಗೆ ಕೂಡಲೇ ಸಾಲ ಸಿಗುವ ಹಾಗೆ ವ್ಯವಸ್ಥೆಯೇನಾದರೂ ಮಾಡಿದ್ದೀರಾ ?

ಶ್ರೀ ಕೆ ಎಚ್. ಪಾಟೀಲ್ :—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕವಾದ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

SHIVAJAMA LANDS IN KOLLEGAL TALUK

518. SRI R. RACHE GOWDA (Hanur) .—Will the Minister for Revenue be pleased to state :—

(*a*) the number of Shivajama land (in acres) in Kollegal Taluk,

(*b*) the number of persons who are in possession and enjoyment of such land,

(*c*) the number of persons who have been granted pattas,

(*d*) whether the Government is thinking of granting pattas a rly to those who have not been granted pattas ?

SRI N. HUTCHAMASTHY GOWDA (Minister for Revenue) .—

	Acres	Cents
(*a*)	29,117-35.	
(*b*)	5,559.	
(*c*)	4,300	
(*d*)	Yes.	

ಶ್ರೀ ಆರ್. ರಾಜೇಗೌಡ .—(ಅ) ಪ್ರಶ್ನೆಗೆ ಉತ್ತರವಾಗಿ ೫೫೫೫ ಜನರು ಈ ಭೂಮಿಯನ್ನು ಅವರ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆಂದು ಹೇಳಿದ್ದೀರಿ ಆ ಪೈಕಿ ಪಟ್ಟಾ ಇಲ್ಲದಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ .—ಇದರಲ್ಲಿ ಹೇಳಿರುವ ಪ್ರಕಾರ ೫೫೫೫ ಜನರು ಭೂಮಿಯ ಸ್ವಾಧೀನದಲ್ಲಿದ್ದರೆ, ಕೆಲವರಿಗೆ ಸರ್ಕಾರಿ ಬಂಜರು ಭೂಮಿಯೂ ಸಹ ಸೇರಿದೆ. ಬೇರೆಯವರು ಅದರೊಳಗೆ ಸೇರಿದ್ದಾರೆಂಬ ವರ್ತಮಾನ ನನ್ನಲ್ಲಿಲ್ಲ.

ಶ್ರೀ ಆರ್. ರಾಜೇಗೌಡ .—೧೨೫ ಜನಗಳಿಗೆ ಇನ್ನೂ ಪಟ್ಟಾ ಕೊಡಬೇಕಾಗಿದೆ. ಅದಕ್ಕಾಗಿ ಸ್ಪೆಷಲ್ಲಾಗಿ ಒಬ್ಬ ಅಸಿಸ್ಟೆಂಟ್ ಕಮೀಷನರನ್ನು ನೇಮಿಸುವುದು ಸಾಧ್ಯವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಕೊಳ್ಳೇಗಾಲಕ್ಕೆ ನಾನು ಹೋಗಿ ಅಲ್ಲಿರತಕ್ಕ ಸಮಸ್ಯೆಗಳನ್ನು ಖುದ್ದಾಗಿ ತಿಳಿದುಕೊಂಡು ಅಲ್ಲಿಯ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಇರತಕ್ಕ ಸಿಬ್ಬಂದಿಯೊಳಗೆ ಆ ಕೆಲಸ ಮಾಡುವುದಕ್ಕೆ ಸಾಧ್ಯ ಮತ್ತು ಜಾಗ್ರತೆಯಾಗಿ ಈ ಕೆಲಸವನ್ನು ಪೂರೈಸುತ್ತೇವೆಂದು ಅಧಿಕಾರಿಗಳು ಭರವಸೆ ಕೊಟ್ಟಿದ್ದಾರೆ.

ಶ್ರೀ ಎಂ. ಬಿ. ರಾಮಸ್ವಾಮಿ .—(೫) ಪ್ರಶ್ನೆಗೆ ಉತ್ತರವಾಗಿ ೪೩೦೦ ಪಟ್ಟಾಗಳನ್ನು ವಿತರಣೆ ಮಾಡಿದ್ದೀರಿ. ಅದರಲ್ಲಿ ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ನನ್ನಲ್ಲಿ ಇರುವ ವರ್ತಮಾನದ ಪ್ರಕಾರ ೧೯೬೯ನೇ ಇಸವಿಗಿಂತ ಮುಂಚಿತವಾಗಿ ಸರ್ಕಾರದವರು ಯಾವ್ಯಾವ ಬಂಜರು ಭೂಮಿ ಇದೆಯೋ ಅದನ್ನು ವಿತರಣೆ ಮಾಡಿಕೊಳ್ಳಬಹುದೆಂದು ಮದ್ರಾಸ್ ಸರ್ಕಾರದವರು ತಿಳಿಸಿದ್ದಾರೆ. ಅದರಲ್ಲಿ ಎಷ್ಟು ಜನ ಹರಿಜನರು ಆಕ್ರಮಿಸಿಕೊಂಡಿದ್ದಾರೆಂಬ ಬಗ್ಗೆ ನನ್ನಲ್ಲಿ ಉತ್ತರವಿಲ್ಲ.

ಶ್ರೀ ಟಿ. ಎಂ. ಮಂಜುನಾಥ .—ಯಾವ್ಯಾವ ಜಮೀನಿಗೆ ಸರ್ಕಾರದವರು ಆಧಾರವಾಗುತ್ತಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಸರ್ಕಾರದ ಯಾವ್ಯಾವ ಶಿವಾಯಿ ಲ್ಯಾಂಡ್ ಇದೆಯೋ ಅದನ್ನು ವ್ಯವಸಾಯ ಮಾಡುವುದಕ್ಕೋಸ್ಕರ, ಹಳೆಯ ಮೈಸೂರು ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೋಸ್ಕರ, ಗ್ರೋಮೋರ್ ಪುಡ್ ಸ್ಕೀಂನಲ್ಲಿ ನಿವಂಗೆ ಎಷ್ಟೆಷ್ಟು ಜಮೀನು ಬೇಕೋ ಅಷ್ಟು ಜಮೀನಿನಲ್ಲಿ ಉತ್ತುಕೊಳ್ಳಿ ಎಂದು ಹೇಳಿದೆ. ಆ ರೀತಿ ಉತ್ತಿರುವ ಭೂಮಿಯನ್ನು ಪಡೆದಿರುವವರು ಎಷ್ಟು ಜನರು ಇದ್ದಾರೋ ಅವರಿಗೆಲ್ಲರಿಗೂ ಪಟ್ಟಾ ಕೊಟ್ಟಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ .—ಮಾನ್ಯ ಮಂತ್ರಿಗಳು ಯಾರ್ಯಾರು ಉತ್ತು ಕೊಂಡಿದ್ದಾರೋ ಅವರೆಲ್ಲರಿಗೂ ಪಟ್ಟಾ ಕೊಡುವ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರು. ಅಂತಹವರಲ್ಲಿ ಕೆಲವರು ಸರ್ಟಿಫಿಯೆಂಟ್ ಹೋಲ್ಡರ್ಸ್ ಎನ್ನುವುದಾಗಿ ಕಂಡಿದ್ದೇವೆ. ಆದ್ದರಿಂದ ಈಗ ಅವರನ್ನು ಎವಿಕ್ಟ್ ಮಾಡಿಸಿ ಬಡವರಿಗೆ ಅವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಇತ್ತೀಚೆಗೆ ಒಂದು ರೂಲ್ ಮಾಡಿ ೧೦ ಎಕರೆ ಖುಷ್ಕಿಗಿಂತ ಜಾಸ್ತಿ ಇರುವವರು ಪೆಟ್ಟು ನೀರಿನ ಅನುಕೂಲ ಇರುವವರು ಎರಡು ಎಕರೆಗಳಿಗಿಂತ ಜಾಸ್ತಿ ಇರುವವರು ಸಾಮಾನ್ಯವಾಗಿ ನೀರಿನ ಅನುಕೂಲ ಇರುವವರು ೪ ಎಕರೆಗಳಿಗಿಂತ ಜಾಸ್ತಿಯಾಗಿ ಯಾರು ಉತ್ತುಕೊಂಡಿದ್ದಾರೋ ಅಂತಹವರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳುವ ನಿರ್ಣಯವನ್ನು ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ .—೫೫೫೯ ಜನರ ಪೈಕಿ ಎಷ್ಟು ಜನ ಜಮೀನು ಇಲ್ಲದವರು ಇದ್ದಾರೆ ? ಮತ್ತು ಎಷ್ಟು ಜನ ಸಫಿಷಿಯೆಂಟ್ ಹೋಲ್ಡರ್ಸ್ ಇದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಅಷ್ಟು ಪೂರಾ ವಿವರ ನನ್ನಲ್ಲಿಲ್ಲ.

ಶ್ರೀ ಆರ್. ರಾಜೇಗೌಡ —ನಂಜನಗೂಡಿನಲ್ಲಿ ಲ್ಯಾಂಡ್ ಆಕ್ವಿಜಿಷನ್ ಆಫೀಸರ್ ಒಬ್ಬರಿರಂ ಇದ್ದಾರೆ. ಅವರನ್ನು ಇನ್ ಛಾರ್ಜ್ ಆಗಿ ಬರೀ ಪಟ್ಟಾ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಈ ಕೆಲಸವನ್ನು ಈಗಿರತಕ್ಕ ಅಧಿಕಾರಿಗಳು ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಸ್ವಲ್ಪ ದಿನಗಳು ಕಾದು ನೋಡಿ ಅವರು ಆ ಕೆಲಸವನ್ನು ಬೇಗ ಮಾಡದಿದ್ದರೆ ಬೇರೆ ವ್ಯವಸ್ಥೆ ಮಾಡಿ ಉಳಿದವರಿಗೆ ಪಟ್ಟಾ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

1 30 P.M.

S.T. REPRESENTATIVES ON T.D. Bs. AND V.Ps IN VIRAJPET AND SOMWARPET TALUKS

523. SRI G. K. SUBBAIAH (Virajpet) —

Will the Minister for Cemm nity Development and Social Welfare be pleased to state:—

(*a*) the total population of the Scheduled Tribes of H. D. Kote Taluk, Mysore District and the Total population of Scheduled Tribes of Virajpet Taluk and Somwarpet Taluk, Coorg District as per 1961 Census ;

(*b*) the total populati n of Sche uled Castes people of these Taluks as per 1961 Census :

(*c*) the number of Scheduled Tribes representatives in the Taluk Development Boards and Village Panchayats in these Taluks :

(*d*) whether the present Taluk Development Board an l Village Panchayats are represented by Tribal people:

(*e*) if not, whether there is any proposal to amend the Rules.

SRI M. MALLIKARJUNA SWAMY (Minister for Community Development and Social Welfare).—

(*a*)	1	H. D. Kote Taluk	...	...	4,070
	2	Virajpet Taluk	...	...	21,143
	3	Somwarpet Taluk	...	...	3,802
(b)	1	H. D. Kote Taluk	...	...	23,607
	2	Virajpet Taluk	...	...	10,591
	3	Somwarpet Taluk	...	...	14,682

(*c*) *H. D. Kote*

1 No representatives in TDB. There are 45 representatives in the Village Panchayats.

Virajpet and Somwarpet Taluks

There are no S. T. Representatives either in TDBs or in V.Ps.

(*d*) No.

(*e*) This will be examined.